ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,

ಆನಂದರಾವ್ ವೃತ್ತ, ಬೆಂಗಳೂರು-560 009.

ಸಂಖ್ಯೆ: ಸಿಜಿಎ(2)ಇತರೆ01/2019-20 ದಿನಾಂಕ: 17/06/2020

## ಸುತ್ತೋಲೆ

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗಲೇ ಮರಣ ಹೊಂದಿದ ನೌಕರರ ಅವಲಂಬಿತರಿಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅರೆಸರ್ಕಾರಿಪತ್ರ ಸಂಖ್ಯೆ ಆಕುಕ 85 ಸಿ&ಆರ್ 2019 ದಿನಾಂಕ:30-05-2020
2. ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ನೇಮಕಾತಿ) ನಿಯಮಗಳು 1996 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)

********

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗಲೇ ಮರಣ ಹೊಂದಿದ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ನಿರ್ದೇಶನಾಲಕ್ಕೆ ಅಪೂರ್ಣ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದು, ಇದರಿಂದ ನಿರ್ದೇಶನಾಲಯದ ಹಂತದಲ್ಲಿ ಹಲವಾರು ಪ್ರಕರಣಗಳು ಅನಾವಶ್ಯಕ ಬಾಕಿ ಉಳಿಯಲು ಕಾರಣವಾಗುತ್ತಿದೆ. ಉಲ್ಲೇಖ(1)ರ ಸರ್ಕಾರದ ಅರೆಸರ್ಕಾರಿಪತ್ರದಲ್ಲಿ ಅನುಕಂಪದ ಆಧಾರದ ನೇಮಕಾತಿಯ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಬೇಕೆಂದು ಹಾಗೂ ಕೈಗೊಂಡ ಕ್ರಮದ ಬಗ್ಗೆ ಕಾಲಕಾಲಕ್ಕೆ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿರುತ್ತಾರೆ.

ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಮಾನ್ಯ ಆಯುಕ್ತರು ಈ ಕುರಿತು ಕೂಡಲೇ ಕ್ರಮ ಕೈಗೊಂಡು ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸೂಚಿಸಿರುತ್ತಾರೆ.

ಆದುದುರಿಂದ, ಇನ್ನು ಮುಂದೆ ಅನುಕಂಪದ ಆಧಾರದ ನೇಮಕಾತಿಗೆ ಪ್ರಸ್ತಾವನೆಯನ್ನು ಸಲ್ಲಿಸುವಾಗ ಮೃತ ನೌಕರರು ಕಾರ್ಯ ನಿರ್ವಹಿಸುತ್ತಿದ್ದ ಕಛೇರಿ ಮುಖ್ಯಸ್ಥರು ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ನೇಮಕಾತಿ) ನಿಯಮಗಳು 1996 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ಗಳ ಅಡಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಎಲ್ಲಾ ಅವಶ್ಯಕ ಮೂಲ/ಛಾಯಾಪ್ರತಿಗಳಲ್ಲಿ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸುವುದು.

ಕಛೇರಿ ಮುಖ್ಯಸ್ಥರಿಂದ ಸ್ವೀಕೃತವಾದ ಪ್ರಸ್ತಾವನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನೊಂದಿಗೆ ದಾಖಲೆ/ಮಾಹಿತಿಗಳನ್ನು ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು ಖುದ್ದು ಪರಿಶೀಲಿಸಿ, ದೃಢೀಕರಿಸಿ ಪೂರ್ಣಪ್ರಮಾಣದ ಪ್ರಸ್ತಾವನೆಯನ್ನು ಮಾತ್ರ ನಿರ್ದೇಶನಾಯಲಕ್ಕೆ ಸಲ್ಲಿಸಲು ಸೂಚಿಸಿದೆ.

**ಒಂದುವೇಳೆ ಪುನ: ಅಪೂರ್ಣ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಲ್ಲಿ, ಸಂಬಂಧಿಸಿದ ನಿಯಂತ್ರಣಾಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಿ ಅವರುಗಳ ವಿರುದ್ಧ ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಎಂದು ಸೂಚಿಸಲಾಗಿದೆ.**

17/6.

ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.

-2-

**ಮಾಹಿತಿಗಾಗಿ:**

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ ಬೆಂಗಳೂರು.
2. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
3. ಮಾನ್ಯ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

**ಮಾಹಿತಿಗಾಗು ಮತ್ತು ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲಾ ಆರೋಗ್ಯ ಮತು ಕುಟುಂಬ ಕಲ್ಯಾಣಾಧಿಕಾರಿಗಳು
2. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು
3. ನಿರ್ದೇಶಕರು/ಡೀನ್/ವೈದ್ಯಕೀಯ ಅಧೀಕ್ಷಕರು.
4. ಮುಖ್ಯಸ್ಥರು, ಆರೋಗ್ಯ ಮತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಎಲ್ಲಾ ಸ್ವಾಯತ್ತ ಸಂಸ್ಥೆಗಳು
5. ಆಡಳತ ವೈದ್ಯಾಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಳ ಕಛೇರಿ ಮತ್ತು ತಾಲ್ಲೂಕು/ಸಮುದಾಯ/ಪ್ರಾಥಮಿಕ ಆರೋಗ್ಯ ಕೇಂದ್ರಗಳು.
6. ಕಛೇರಿ ಪ್ರತಿ.

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

## <u>ಅನುಕಂಪದ ಆಧಾರದ ಮೇಲೆ ನೇಮಕಾತಿ ಪ್ರಸ್ತಾವನೆಯ ದಾಖಲೆಗಳ ಪರಿಶೀಲನೆ ಚೆಕ್-ಲಿಸ್ಟ್</u>

<table>
<tr><th></th><th><u>ಸಲ್ಲಿಸಬೇಕಾದ ದಾಖಲೆಗಳು/ಮಾಹಿತಿಗಳು</u></th><th><u>ಷರಾ</u></th></tr>
<tr><td>1</td><td>ಅಭ್ಯರ್ಥಿಯ ಪೂರ್ಣ ಹೆಸರು<br><br>ಮತ್ತು ವಿಳಾಸ</td><td></td></tr>
<tr><td>2</td><td>ದಿವಂಗತ ಸರ್ಕಾರಿ ನೌಕರರ ಹೆಸರು<br>ಹಾಗೂ ಧಾರಣೆ ಮಾಡಿದ್ದ ಹುದ್ದೆ</td><td></td></tr>
<tr><td>3</td><td><u>ಅನುಬಂಧ-1</u> ಕಡ್ಡಾಯವಾಗಿ ಎಲ್ಲಾ ಕಾಲಂ ಭರ್ತಿಮಾಡಿ ದಿನಾಂಕ/ ಸಹಿ ಯೊಂದಿಗೆ (ನಿಯಮ 5 ರನ್ವಯ)</td><td>ಲಗತ್ತಿಸಿದೆ/ಇಲ್ಲ</td></tr>
<tr><td>4</td><td><u>ನಮೂನೆ-2</u> ಕಡ್ಡಾಯವಾಗಿ ಎಲ್ಲಾ ಕಾಲಂ ಭರ್ತಿಮಾಡಿ ದಿನಾಂಕದೊಂದಿಗೆ ಕಛೇರಿ ಮುಖ್ಯಸ್ಥರ ಸಹಿ ಹಾಗೂ ನಿಯಂತ್ರಣಾಧಿಕಾರಿಗಳ ದೃಢೀಕರಣದೊಂದಿಗೆ</td><td>ಲಗತ್ತಿಸಿದೆ/ಇಲ್ಲ</td></tr>
<tr><td>5</td><td>ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿದಾರರು ಸಲ್ಲಿಸಿರುವ ದಿನಾಂಕ ನಮೂದಿಸಿರುವ ಮನವಿ<br>ಮತ್ತು ಪ್ರಥಮ ಭಾರಿಗೆ ಅರ್ಜಿ ಸಲ್ಲಿಸಿದ ದಿನಾಂಕ</td><td>ಲಗತ್ತಿಸಿದೆ/ಇಲ್ಲ</td></tr>
<tr><td>6</td><td>ಅಭ್ಯರ್ಥಿಯ ಜನ್ಮ ದಿನಾಂಕ:<br>ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ/ ಜನನ ಪ್ರಮಾಣ ಪತ್ರ ದನ್ವಯ</td><td><table><tr><td>ದಿನಾಂಕ</td><td>ತಿಂಗಳು</td><td>ಇಸವಿ/ವರ್ಷ</td></tr><tr><td></td><td></td><td></td></tr></table></td></tr>
<tr><td>7</td><td>ವಯೋಮಿತಿ<table><tr><th>ಪ್ರವರ್ಗ</th><th>ಗರಿಷ್ಠ ವಯೋಮಿತಿ</th><th>ವಿಧವೆ/ ಅಂಗವಿಕಲರಿಗೆ ವಿನಾಯಿತಿ</th></tr><tr><td>ಸಾಮಾನ್ಯ</td><td>35 ವರ್ಷ</td><td>45 ವರ್ಷ</td></tr><tr><td>ಇತರೆ ಹಿಂದುಳಿದ ವರ್ಗ</td><td>38 ವರ್ಷ</td><td>48 ವರ್ಷ</td></tr><tr><td>ಪ.ಜಾ./ಪ.ಪಂ. /ಪ್ರವರ್ಗ-1</td><td>40 ವರ್ಷ</td><td>50 ವರ್ಷ</td></tr></table></td><td><table><tr><td rowspan="3">ವಯಸ್ಸು</td><td>ವರ್ಷ</td><td></td></tr><tr><td>ತಿಂಗಳು</td><td></td></tr><tr><td>ದಿನಗಳು</td><td></td></tr></table><table><tr><td>ವಯೋಮಿತಿ ಒಳಪಟ್ಟಿದ್ದಾರೆಯೇ (ನಿಯಮ 4(2) ರನ್ವಯ</td><td></td></tr></table></td></tr>
<tr><td>8</td><td>ಅಭ್ಯರ್ಥಿಯು ಸರ್ಕಾರಿ ನೌಕರ ಮರಣ ಹೊಂದಿದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸಿರುವರೇ (ನಿಯಮ 5 ರನ್ವಯ)</td><td>ಹೌದು/ಇಲ್ಲ</td></tr>
<tr><td>9</td><td>ಅಭ್ಯರ್ಥಿ ಅಪ್ರಾಪ್ತ ವಯಸ್ಕರಾದಲ್ಲಿ ಸರ್ಕಾರಿ ನೌಕರ ಮರಣ ಹೊಂದಿದ ಒಂದು ವರ್ಷದಲ್ಲಿ ಪ್ರಾಪ್ತ ವಯಸ್ಕರಾಗಿ ತದನಂತರ ಒಂದು ವರ್ಷದಲ್ಲಿ ಅರ್ಜಿ ಸಲ್ಲಿಸಿರುವರೇ (ನಿಯಮ 5 ರನ್ವಯ)</td><td>ಹೌದು/ಇಲ್ಲ</td></tr>
<tr><td>10</td><td>ಶಾಲಾ ಮುಖ್ಯಸ್ಥರ ಮೂಲ ಸಹಿ ಇರುವ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಮತ್ತು 1989 ನೇ ಇಸ್ವಿ ನಂತರ ಜನಿಸಿದ್ದಲ್ಲಿ ಜನನ ಪ್ರಮಾಣ ಪತ್ರ</td><td>ಲಗತ್ತಿಸಿದೆ/ಇಲ್ಲ</td></tr>
<tr><td>11</td><td>ಎಸ್.ಎಸ್.ಎಲ್.ಸಿ./ಪಿಯುಸಿ./ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ವಿದ್ಯಾರ್ಹತೆ ತೇರ್ಗಡೆ ಹೊಂದಿದ ದಿನಾಂಕ<br>ಅಂಕ ಪಟ್ಟಿಗಳು/ ಪದವಿ ಪ್ರಮಾಣ ಪತ್ರಗಳು ನೈಜತೆಯಿಂದ ಕೂಡಿರುವ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದಿಂದ ನೈಜತೆಯ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು.<br>(ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 10 ಸೆನೆನಿ 2019, ಬೆಂಗಳೂರು, ದಿನಾಂಕ: 17.07-2019)</td><td>ಲಗತ್ತಿಸಿದೆ/ಇಲ್ಲ</td></tr>
</table>

| | | |
|---|---|---|
| 12 | ನೇಮಕಾತಿ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯ ವಿದ್ಯಾರ್ಹತೆ ಮತ್ತು ಯಾವ ಹುದ್ದೆಗೆ ಅರ್ಹರಾಗಿರುತ್ತಾರೆ. (ನಿಯಮ 4(3)ರನ್ವಯ) (ಅಭ್ಯರ್ಥಿಯು ಡಿಪ್ಲೋಮ ಅಥವಾ ಇತರೆ ವ್ಯಾಸಂಗ ಮಾಡಿದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 81 ಸೇವನೆ 2017 ದಿನಾಂಕ: 27-02-2018 ರನ್ವಯ ಪರಿಶೀಲಿಸುವುದು) | ವಿದ್ಯಾರ್ಹತೆ:<br>ಅರ್ಹರಾದ : |
| 13 | ದಿವಂಗತ ಸರ್ಕಾರಿ ನೌಕರರ ಮರಣ ಪ್ರಮಾಣ ಪತ್ರ (ಷರಾ ಕಾಲಂನಲ್ಲಿ ಷರಾ ನಮೂದಿಸಿದಲ್ಲಿ ಅದರ ಬಗ್ಗೆ ವಿವರ ಸಲ್ಲಿಸಬೇಕು) | ಲಗತ್ತಿಸಿದೆ/ಇಲ್ಲ |
| 14 | ತಹಶೀಲ್ದಾರರಿಂದ ಪಡೆದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ | ಲಗತ್ತಿಸಿದೆ/ಇಲ್ಲ |
| 15 | ನೇಮಕಾತಿಗೆ ಅರ್ಜಿ ಸಲ್ಲಿಸಿರುವ ದಿನಾಂಕದಂದು ನಿಯಮಗಳನ್ವಯ (ಬೆಂಗಳೂರಿನ ಪ್ರ.ದ.ಸ ಹುದ್ದೆಗೆ ಅನ್ವಯಿಸುವಂತೆ ವಾರ್ಷಿಕ ವರಮಾನದ ಲೆಕ್ಕಾಚಾರ) ವಾರ್ಷಿಕ ವರಮಾನದ ಮಿತಿ (ನಿಯಮ 4(1) ರನ್ವಯ) | ರೂ.<br>ಹೌದು/ಇಲ್ಲ |
| 16 | ಅಭ್ಯರ್ಥಿಯ ಕುಟಂಬದ ವರಮಾನ<br>ತಹಶೀಲ್ದಾರರಿಂದ ಪಡೆದ '**ಅನುಕಂಪದ ಆಧಾರದ ಮೇಲಿನ ನೇಮಕಾತಿ ಉದ್ದೇಶಕ್ಕೆ ಮಾತ್ರ**" ಎಂಬ ಆದಾಯದ ದೃಢೀಕರಣ ಪತ್ರದ ದನ್ವಯ | ಲಗತ್ತಿಸಿದೆ/ಇಲ್ಲ |
| 17 | ವಾರ್ಷಿಕ ವರಮಾನ (ನಿಯಮ 4(1) ರನ್ವಯ) ಮಿತಿಯೊಳಗಿರುತ್ತದೇಯೇ? | ಹೌದು/ಇಲ್ಲ |
| 18 | ಮೃತ ನೌಕರರ ಕುಟುಂಬದ ಇನ್ನಿತರ ಅರ್ಹ ಸದಸ್ಯರು ಅನುಕಂಪದ ಆಧಾರದ ಮೇಲಿನ ನೇಮಕಾತಿಯನ್ನು ಬೇಡ ಎಂಬುದಕ್ಕೆ **ಸಮಂಜಸವಾದ ಕಾರಣ** ನೀಡಿರುವ ಅಫಿಡೆವಿಟ್ (ನಿಯಮ 3(2) ರನ್ವಯ) | ಲಗತ್ತಿಸಿದೆ/ಇಲ್ಲ |
| 19 | **ಅ**. ಅರ್ಜಿದಾರರ ಪೂರ್ವಾಪರ ನಡತೆ ಬಗ್ಗೆ ಜಿಲ್ಲಾ ಪೋಲೀಸ್ ಅಧೀಕ್ಷಕರಿಂದ ಪಡೆದ ಪರಿಶೀಲನಾ ವರದಿಯ ಮೂಲ ಪ್ರತಿ. | ಲಗತ್ತಿಸಿದೆ/ಇಲ್ಲ |
| | **ಆ**. ಪೋಲಿಸ್ ವರದಿಯಂತೆ ಅಭ್ಯರ್ಥಿಯ ಮೇಲೆ ಕ್ರಿಮಿನಲ್ ಮೊಕದ್ದಮೆ/ಗುನ್ನಾ ದಾಖಲೆಯಾಗಿದೆಯೇ ? | ಹೌದು/ಇಲ್ಲ |
| 20 | ಮೃತ ನೌಕರರ ಕುಟುಂಬದ ಇತರ ಸದಸ್ಯರು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಸಂಸ್ಥೆ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವರೇ/ಇಲ್ಲವೋ ಎಂಬುದರ ಬಗ್ಗೆ ಅಫಿಡೆವಿಟ್/ ತಹಶೀಲ್ದಾರರ ಪ್ರಮಾಣ ಪತ್ರ | ಲಗತ್ತಿಸಿದೆ/ಇಲ್ಲ |
| 21 | ಅರ್ಜಿದಾರರ ಉದ್ಯೋಗ ವಿನಿಮಯ ಕಛೇರಿಯ ನೊಂದಣಿ ಗುರುತಿನ ಪತ್ರ, ನೊಂದಾಯಿಸದಿದ್ದಲ್ಲಿ ಇಲ್ಲವೆಂಬ ಮಾಹಿತಿಯ ಅಫಿಡೆವಿಟ್. | ಲಗತ್ತಿಸಿದೆ/ಇಲ್ಲ |
| 22 | ಅಭ್ಯರ್ಥಿಯು ಮೃತ ಸರ್ಕಾರಿ ನೌಕರರ ವಿಧವೆ (ಹೆಂಡತಿ) ಯಾಗಿದ್ದಲ್ಲಿ ಮರು ಮದುವೆಯಾಗಿಲ್ಲ ಎನ್ನುವ ಬಗ್ಗೆ ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರ ಹಾಗೂ ಅಭ್ಯರ್ಥಿಯಿಂದ ಅಫಿಡವಿಟ್ (ನಿಯಮ 3(2)ರನ್ವಯ) | ಲಗತ್ತಿಸಿದೆ/ಇಲ್ಲ |
| 23 | ಅಭ್ಯರ್ಥಿಯು ಮೃತ ಸರ್ಕಾರಿ ನೌಕರರ ಮಗಳಾಗಿದ್ದಲ್ಲಿ ಅವಿವಾಹಿತರಾಗಿರುತ್ತಾರೆಂಬ ಬಗ್ಗೆ ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರ ಹಾಗೂ ಅಭ್ಯರ್ಥಿಯಿಂದ ಅಫಿಡವಿಟ್ (ನಿಯಮ 3(2)ರನ್ವಯ) | ಲಗತ್ತಿಸಿದೆ/ಇಲ್ಲ |
| 24 | ಅವಿವಾಹಿತ ಮೃತ ನೌಕರಿಗೆ ಸಂಬಂಧಿಸಿದಂತೆ ಮೃತ ಸರ್ಕಾರಿ ನೌಕರರು ಮರಣಹೊಂದಿದ ಸಮಯದಲ್ಲಿ ಅವಿವಾಹಿತರಾದ್ದರೆಂಬ ಬಗ್ಗೆ **ಮತ್ತು** ನೇಮಕಾತಿಗೆ ಅರ್ಜಿ ಸಲ್ಲಿಸಿದ ಸಹೋದರ/ ಸಹೋದರಿ ಯವರು ಅವಿವಾಹಿತರಾಗಿರುತ್ತಾರೆಂಬ ಬಗ್ಗೆ, ವಿಧವಾ ಸಹೋದರಿಯಾಗಿದ್ದಲ್ಲಿ ಮರು ಮದುವೆಯಾಗಿಲ್ಲ ಎಂಬ ಬಗ್ಗೆ ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರ ಹಾಗೂ ಅಭ್ಯರ್ಥಿಯಿಂದ ಅಫಿಡವಿಟ್ (ನಿಯಮ 3(2)ರನ್ವಯ) | ಲಗತ್ತಿಸಿದೆ/ಇಲ್ಲ |

<table>
<tr><td rowspan="4">25</td><td rowspan="4">ಮೃತ ಸರ್ಕಾರಿ<br>ನೌಕರರ<br>ಸೇವಾ ವಿವರ</td><td>ಜನ್ಮ ದಿನಾಂಕ</td><td></td></tr>
<tr><td>ಸೇವೆಗೆ ಸೇರಿದ ದಿನಾಂಕ</td><td></td></tr>
<tr><td>ಮರಣ ದಿನಾಂಕ</td><td></td></tr>
<tr><td>ನಿವೃತ್ತಿಯಾಗ ಬೇಕಾಗಿದ್ದ ದಿನಾಂಕ</td><td></td></tr>
<tr><td>26</td><td colspan="2">ದಿವಂಗತ ನೌಕರರ ಮೂಲ ಸೇವಾ ಪುಸ್ತಕ ಮರಣದ ದಿನಾಂಕ ಮತ್ತು ಪಿಂಚಣಿ ಮಂಜೂರಾತಿ ವಿವರ ನಮೂದಿಸಿ ಸಹಿ ಮಾಡಿರಬೇಕು. (ಪತ್ರಾಂಕಿತ ಅಧಿಕಾರಿಯಾಗಿದ್ದಲ್ಲಿ ಮಹಾಲೇಕಪಾಲರಿಂದ ಜನ್ಮ ದಿನಾಂಕವನ್ನೊಳಗೊಂಡ ಸೇವಾ ವಿವರ)</td><td>ಲಗತ್ತಿಸಿದೆ/ಇಲ್ಲ</td></tr>
<tr><td>27</td><td colspan="2">ಮಹಾಲೇಖಪಾಲರಿಂದ ಮೃತ ನೌಕರರ ಕುಟುಂಬ ಸದಸ್ಯರಿಗೆ ಮಂಜೂರು ಮಾಡಿರುವ ಕುಟುಂಬ ಪಿಂಚಣಿ ಮತ್ತು ಡಿಸಿಆರ್‌ಜಿ ಆದೇಶದ ಪ್ರತಿ <u>ಅಥವಾ</u> ಎನ್.ಪಿ.ಎಸ್.ಅಡಿ ಬರುವ ಮೃತ ನೌಕರರ ಕುಟುಂಬ ಸದಸ್ಯರಿಗೆ 'ಇಡಿಗಂಟಿನ ಪರಿಹಾರ' ಮಂಜೂರು ಆದೇಶದ ಪ್ರತಿ.</td><td>ಲಗತ್ತಿಸಿದೆ/ಇಲ್ಲ</td></tr>
<tr><td>28</td><td colspan="2">ಎಸ್‌ಎಸ್‌ಎಲ್‌ಸಿ ಹಾಗೂ ಉನ್ನತ ಪರೀಕ್ಷೆಗಳಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆ/ದ್ವಿತೀಯ ಭಾಷೆ ಅಥವಾ ಶಿಕ್ಷಣ ಮಾಧ್ಯಮ ಕನ್ನಡ ತೆಗೆದುಕೊಂಡು ತೇರ್ಗಡೆ ಹೊಂದಿದ ವಿವರ</td><td>ಲಗತ್ತಿಸಿದೆ/ಇಲ್ಲ</td></tr>
<tr><td>29</td><td colspan="2">ಕರ್ನಾಟಕ ನಾಗರಿಕ ಸೇವಾ (ನೇಮಕಾತಿ) (ಕನ್ನಡ ಭಾಷಾ ಪರೀಕ್ಷೆ) ನಿಯಮಗಳು 1984 ರನ್ವಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಹೊಂದಿರುವರೇ</td><td>ಹೌದು/ಇಲ್ಲ</td></tr>
<tr><td>30</td><td colspan="2">ಮೃತರ ನೇಮಕಾತಿ ಸಕ್ರಮ ನೇಮಕಾತಿಯೇ ಅಥವಾ ದಿನಗೂಲಿಯಿಂದ ಸಕ್ರಮಗೊಂಡಿದ್ದಲ್ಲಿ ದಾಖಲೆ/ಸರ್ಕಾರದಿಂದ ನಿಗಧಿ ಪಡಿಸಿರುವ ನಮೂನೆಯಲ್ಲಿ ವರದಿ (ನಿಯಮ 6(5) ರನ್ವಯ)</td><td>ಲಗತ್ತಿಸಿದೆ/ಇಲ್ಲ</td></tr>
<tr><td>31</td><td colspan="2">ದಿವಂಗತ ನೌಕರರ: ಹೆಸರಿನಲ್ಲಿ ಹೆಚ್ಚಿನ ವ್ಯತ್ಯಾಸವಿದ್ದಲ್ಲಿ ನ್ಯಾಯಾಲಯದ ಡಿಕ್ರಿ ಅಲ್ಪ ವ್ಯತ್ಯಾಸವಿದ್ದಲ್ಲಿ ಅಫೀಡವಿಟ್ ಸಲ್ಲಿಸುವುದು (ಮೂಲ ಸೇವಾ ಪುಸ್ತಕ, ಬೇರೆ ಬೇರೆ ದಾಖಲೆಗಳಲ್ಲಿ ವ್ಯತ್ಯಾಸ)</td><td>ಲಗತ್ತಿಸಿದೆ/ಇಲ್ಲ</td></tr>
<tr><td>32</td><td colspan="2">ಅರ್ಜಿದಾರರ: ಹೆಸರಿನಲ್ಲಿ ಹೆಚ್ಚಿನ ವ್ಯತ್ಯಾಸವಿದ್ದಲ್ಲಿ ನ್ಯಾಯಾಲಯದ ಡಿಕ್ರಿ ಅಲ್ಪ ವ್ಯತ್ಯಾಸವಿದ್ದಲ್ಲಿ ಅಫೀಡವಿಟ್ ಸಲ್ಲಿಸುವುದು ಅಂಕಪಟ್ಟಿ, ಪ್ರಮಾಣ ಪತ್ರಗಳಂತಹ ಬೇರೆ ಬೇರೆ ದಾಖಲೆಗಳಲ್ಲಿ ವ್ಯತ್ಯಾಸ)</td><td>ಲಗತ್ತಿಸಿದೆ/ಇಲ್ಲ</td></tr>
<tr><td>33</td><td colspan="2">ಮೇಲಿನ ಅಂಶಗಳ ಆಧಾರದಂತೆ ಅರ್ಭರ್ಥಿಯು ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಲು ಅರ್ಹರೇ</td><td>ಹೌದು/ಇಲ್ಲ</td></tr>
</table>

**ಕಛೇರಿ ಮುಖ್ಯಸ್ಥರ ಸಹಿ**
**ಮೊಹರು**

**ನಿಯಂತ್ರಣಾಧಿಕಾರಿಗಳ ದೃಢೀಕರಣ**

**ಸಹಿ ಮತ್ತು ಮೊಹರು**